ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	1811 (ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ)
ಸದಸ್ಯರ ಹೆಸರು :	ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ :	15-03-2022
ಉತ್ತರಿಸುವವರು :	ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಯಾವುದೇ ತೊಂದರೆಯಿರುವುದಿಲ್ಲ.
ಆ)	ಈ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಆಗುತ್ತಿದೆಯೇ; ನಗರ ಪ್ರದೇಶ ಕಸವನ್ನು ಗ್ರಾಮಾಂತರ ಪ್ರದೇಶಕ್ಕೆ ಹಾಕುವುದರಿಂದ ಗ್ರಾಮೀಣ ಜನರಿಗೆ ತೊಂದರೆ ಆಗುವುದಿಲ್ಲವೆ;	ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮ 2000 ಮತ್ತು 2016ರ ನಿಯಮಗಳಂತೆ ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಮಾಡಲಾಗುತ್ತಿದೆ. ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ಕಸವನ್ನು ಯಾವುದೇ ಗ್ರಾಮಾಂತರ ಪ್ರದೇಶಕ್ಕೆ ಹಾಕುತ್ತಿಲ್ಲ.
ಇ)	ಕಸ ವಿಲೇವಾರಿ ಮಾಡಲು ಸರ್ಕಾರವು ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಮೀನನ್ನು ಮೀಸಲಿರಿಸಲು ಕ್ರಮ ಜರುಗಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರಕ್ಕೆ ಇರುವ ಸಮಸ್ಯೆಗಳೇನು?	ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಸ ವಿಲೇವಾರಿ ಮಾಡಲು ಜಮೀನುಗಳನ್ನು ಮೀಸಲಿರಿಸಲಾಗಿದೆ. ಜಾಗದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಸಂಖ್ಯೆ: ನಅಇ 103 ಜಿಇಎಲ್ 2022(ಇ)

(ಎನ್.ನಾಗರಾಜ್ ಎಂಟಿಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳ ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

ಅನುಬಂಧ-1

ಅ.ನಂ.	ನಗರಸ್ಥಳೀಯ ಸಂಸ್ಥೆಗಳ ಹೆಸರು	ಮೀಸಲಿರಿಸಿದ ಜಮೀನು
	ಗದಗ	
1	ಗದಗ-ಬೆಟಗೇರಿ ನಗರಸಭೆ	25ಎ04ಗು
2	ಗಜೇಂದ್ರಗಡ -ಪುರಸಭೆ	04ಎ27
3	ಲಕ್ಷ್ಮೇಶ್ವರ -ಪುರಸಭೆ	13ಎ4ಗು
4	ಮುಂಡರಗಿ- ಪುರಸಭೆ	7ಎ24ಗು
5	ನರಗುಂದ- ಪುರಸಭೆ	9ಎಕರೆ
6	ರೋಣ -ಪುರಸಭೆ	9ಎ8ಗು
7	ಮುಳಗುಂದ -ಪ.ಪಂ	5ಎ29ಗು
8	ನರೇಗಲ್ಲ -ಪ.ಪಂ	6.00ಎ
9	ಶಿರಹಟ್ಟಿ -ಪ.ಪಂ	3ಎ17ಗು
	ಧಾರವಾಡ ಜಿಲ್ಲೆ	
	ಹುಬ್ಬಳಿ-ಧಾರವಾಡ	67ಎ 2ಗುಂಟೆ
1	ಅಳ್ನಾವರ-ಪ.ಪಂ	4ಎ31 ಗುಂಟೆ
2	ಅಣ್ಣಿಗೇರಿ- ಪುರಸಭೆ	5ಎ 2ಗುಂಟೆ
3	ಕಲಘಟಗಿ-ಪ.ಪಂ	4ಎ
4	ಕುಂದಗೋಳು-ಪ.ಪಂ	4ಎ
5	ನವಲಗುಂದ- ಪುರಸಭೆ	32ಗುಂಟೆ
	ಹಾವೇರಿ ಜಿಲ್ಲೆ	
1	ಹಾವೇರಿ,ನಗರಸಭೆ	10ಎ
2	ರಾಣೇಬೆನ್ನೂರ,ನಗರಸಭೆ	28ಎ 35 ಗುಂಟೆ
3	ಬ್ಯಾಡಗಿ-ಪುರಸಭೆ	10ಎ
4	ಹಾನಗಲ್ಲ-ಪುರಸಭೆ	15ಎ
5	ಸವಣೂರು-ಪುರಸಭೆ	5ಎ
6	ಶಿಗ್ಗಾಂವ-ಪುರಸಭೆ	10ಎ
7	ಬಂಕಾಪುರ-ಪುರಸಭೆ	5ಎ
8	ಹಿರೇಕೆರೂರು-ಪ.ಪಂ	7ಎ
9	ಗುತ್ತಲ-ಪ.ಪಂ	4ಎ
10	ರಟ್ಟೆಹಳ್ಳಿ-ಪ.ಪಂ	8ಎ30 ಗುಂಟೆ

Snehalatha
Executive Engineer
Directorate of Municipal Administration
Bangalore.